# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಚಾಮರಾಜನಗರ.

**<u>ಸ್ಪೆಷಲ್ ಕೇಸ್ ಸಂಖ್ಯೆ: 42/2021</u>**

**ಚಾಸಾ–15**

**ಪ್ರಾಸಾ–7**

**ದಿನಾಂಕ 03.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| **ಸಾಕ್ಷಿದಾರರ ಹೆಸರು** | : | ರಾಜೇಶ್ ನಾಯ್ಕ |
| **ತಂದೆಯ ಹೆಸರು** | : | ಲೇಟ್. ಮಹದೇವ |
| **ವಯಸ್ಸು** | : | 40 ವರ್ಷ |
| **ವೃತ್ತಿ** | : | ಗ್ರಾಮ ಆಡಳಿತಾಧಿಕಾರಿ |
| **ವಾಸ ಸ್ಥಳ** | : | ಚಾಮರಾಜನಗರ |

**<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :–</u>**

ನಾನು 2018 ರಿಂದ 2019 ರವರೆಗೆ ಚಂದಕವಾಡಿ ಹೋಬಳಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಸಿಇಎನ್ ಪೊಲೀಸ್ ಠಾಣೆಯಿಂದ ದಿ:17.11.2018 ರಂದು ರವಿನಾಯ್ಕ ರವರು ಗಾಂಜಾ ಗಿಡಗಳನ್ನು ಬೆಳೆದಿದ್ದರು ಎನ್ನಲಾದ ಪುಣಜೂರು ಸ್ಟೇಟ್ ಫಾರೆಸ್ಟ್ ಸರ್ವೇ ನಂಬರ್ 2 ರಲ್ಲಿ 4 ಎಕರೆಗೆ ಸಂಬಂಧಿಸಿದಂತೆ ಗಾಂಜಾ ಗಿಡಗಳನ್ನು ಬೆಳೆದಿದ್ದ ಬಗ್ಗೆ ವರದಿ ಕೇಳಿದ್ದರ ಮೇರೆಗೆ ಸದರಿ ಜಮೀನು ರವಿನಾಯ್ಕ/ ಆರೋಪಿ ರವರಿಗೆ ಸೇರಿದೆ ಮತ್ತು ಅಲ್ಲಿ ಗಾಂಜಾ ಗಿಡಗಳನ್ನು ಬೆಳೆಯಲಾಗಿದೆಯೇ ಎಂಬ ಬಗ್ಗೆ ಸ್ಥಳೀಯ ರ ಸಮಕ್ಷಮ ಮಹಜರ್ ಮಾಡಿ ಸ್ಥಳ ಪರಿಶೀಲನೆ ಮಾಡಿ ರೆವಿನ್ಯೂ **ಇನ್ಸ್ಪೆಕ್ಟರ್** ರವರಿಗೆ ವರದಿ ನೀಡಿರುತ್ತೇನೆ. ಮಹಜರ್ ಗೆ ನಾನು ಸಹಿ

ಹಾಕಿದ್ದು ಸಾಕ್ಷಿಯ ಸಹಿಯನ್ನು ನಿಪಿ-11(ಇ) ಎಂದು ಗುರುತಿಸಲಾಯಿತು. ನಿಪಿ-11 ನಾವು ಜರುಗಿಸಿದ ಸ್ಥಳ ಮಹಜರ್ ಆಗಿದ್ದು ಸ್ಥಳ ಮಹಜರ್ ಮಾಡಿದಾಗ ಮತ್ತು 13 ಗಾಂಜಾ ಗಿಡಗಳನ್ನು ಬೆಳೆದಿರುವ ಬಗ್ಗೆ ವರದಿ ನೀಡಿರುತ್ತೇನೆ.

**ಪಾಟೀ ಸವಾಲು – ಆರೋಪಿ ಪರ ವಕೀಲರಿಂದ –**

ಸ್ಥಳಕ್ಕೆ ನಾನು ಮತ್ತ ಸಹೋದ್ಯೋಗಿ ಸುರೇಶ್ ಎಂಬುವವರು ಬೆಳಿಗ್ಗೆ 11.00 ಗಂಟೆಗೆ ಹೋಗಿರುತ್ತೇವೆ. ಸಾಕ್ಷಿದಾರರಿಗೆ ಸ್ಥಳ ಮಹಜರ್ ಸಮಯದಲ್ಲಿ ನೋಟೀಸ್ ನ್ನು ಕೊಟ್ಟಿಲ್ಲ. ಮಹಜರ್ ನ್ನು ನಾನೇ ಬರೆದಿರುತ್ತೇನೆ. ನಾನು ಸುರೇಶ್, ಸ್ಥಳದಲ್ಲಿ ಹಾಜರಿದ್ದ ಗ್ರಾಮಸ್ಥರು ಮಹಜರ್ ಗೆ ಸಹಿ ಮಾಡಿರುತ್ತೇವೆ. ಮಹಜರ್ ನಲ್ಲಿ ಸದರಿ ಸರ್ವೇ ನಂಬರ್ ನಲ್ಲಿ ಎಷ್ಟು ಜಮೀನು ಇದೆ ಎಂದು ಅದರ ಅಳತೆ ಬರೆದಿಲ್ಲ. ಮಹಜರ್ ನಲ್ಲಿ ಬೌಂಡರೀಸ್ ನ್ನು ಬರೆದಿಲ್ಲ. ಮಹಜರ್ ನ್ನು ಎಷ್ಟು ಗಂಟೆಯಿಂದ ಎಷಲ್ಟು ಗಂಟೇಯವರೆಗೆ ಬರೆದಿರುತ್ತೇವೆಎಂದು ನೆನಪಿಲ್ಲ. ಆರೋಪಿಯ ಸ್ಥಳಕ್ಕೆ ಹೋದಾಗ ಜಮೀನಿ ನಲ್ಲಿ ಜೋಳ ಬೆಳೆದಿದ್ದ. ಜೋಳ ಬೆಳೆದ ಬಗ್ಗೆ ಮಹಜರ್ ನಲ್ಲಿ ಬರೆದಿಲ್ಲ.

ನಾನು ಸ್ಥಳಕ್ಕೆ ಹೋಗಿಲ್ಲ, ಮಹಜರ್ ಮಾಡಿಲ್ಲ ಹಾಗೂ ಪೊಲೀಸ್ ರ ಮಾತನ್ನುಕೇಳಿ ದಾಖಲೆಗಳನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ರೀತಿಯ ಗಾಂಜಾ ಗಿಡಗಳು ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**